KAKB720023542022

Presented on : 09-09-2022
Registered on : 09-09-2022
Decided on : 11.08.2026
Duration : 3 years 11 months 2 days

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸೇಡಂ**

**ಉಪಸ್ಥಿತರುಃ**

**ಶ್ರೀ ಬಾಲು,**
ಬಿ.ಎ., ಎಲ್‌ಎಲ್.ಬಿ.,
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ

## ಸಿ.ಸಿ.ನಂ.1532/2022

**ದಿನಾಂಕಃ 11 ನೇ ಆಗಸ್ಟ 2026 ರಂದು**

**ಫಿರ್ಯಾದಿದಾರರುಃ**
ಕರ್ನಾಟಕ ರಾಜ್ಯ (ಮಳಖೇಡ ಪೊಲೀಸರಿಂದ)

**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

**ಆರೋಪಿತರುಃ**
1. ಶ್ರೀಮತಿ ರೇಖಾ ಗಂಡ ಸಿದ್ದಣ್ಣ ಕರನಕೋಟೆ,
ವಯಸ್ಸುಃ *22* ವರ್ಷ, ಉದ್ಯೋಗಃ ಮನೆಕೆಲಸ,

*2.* ಶಾರದಾಬಾಯಿ ಗಂಡ ಸೂರ್ಯಕಾಂತ ಹೆಬ್ಬಾಳ,
ವಃ *60* ವರ್ಷ, ಉಃ ಮನೆಕೆಲಸ,

*3.* ಸಿದ್ದು @ ಸಿದ್ದರಾಮ ತಂದೆ ಸೂರ್ಯಕಾಂತ ಹೆಬ್ಬಾಳ,
ವಃ *21* ವರ್ಷ, ಉಃ ಕಾರಚಾಲಕ,

*4.* ಶರಣಪ್ಪ ತಂದೆ ಸೂರ್ಯಕಾಂತ ಹೆಬ್ಬಾಳ,
ವಃ *26* ವರ್ಷ, ಉಃ ಟೇಲರ ಕೆಲಸ
ಎಲ್ಲರೂ ಸಾಃ ಶಿವಾಜಿನಗರ ರಿಂಗರೋಡ ಕಲಬುರಗಿ.

**(ಆ-1 ರಿಂದ 4 ಶ್ರೀ ವಿ.ಜಿ.ಡಬ್ಲೂ. ವಕೀಲರು)**

1. ಪ್ರಕರಣ ನಡೆದ ದಿನಾಂಕ : 17.07.2022
2. ಪ್ರಕರಣ ದಾಖಲಾದ ದಿನಾಂಕ : 19.07.2022
3. ಫಿರ್ಯಾದಿದಾರರ ಹೆಸರು : ಶ್ರೀಮತಿ ಜಗದೇವಿ ತಂದೆ ಶಿವಶರಣಪ್ಪ ಕರನಕೋಟೆ
4. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕಃ 29.07.2026
5. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕಃ 29.07.2026
6. ಆಪಾದನೆಗಳು : ಭಾ.ದಂ.ಸಂ.ಕಲಂ.323, 324, 504 ಮತ್ತು 506 ಸಂಗಡ 34.
7. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ .**

**ತೀರ್ಪು**

ಠಾಣಾ ಅಮಲ್ದಾರರು, ಮಳಖೇಡ ಪೋಲಿಸ ಠಾಣೆ ಇವರು ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಂಗಡ 34 ರನ್ವಯ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆಃ-**

ದಿನಾಂಕ 17.07.2022 ರಂದು ರಾತ್ರಿ 08.00 ಗಂಟೆಯ ಸುಮಾರಿಗೆ ಮಳಖೇಡ ಪೋಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಹಂಗನಳ್ಳಿ ಗ್ರಾಮದಲ್ಲಿ ಚಾಸಾ1, 4 ನೇದ್ದವರು

ಮನೆಯಲ್ಲಿ ಇದ್ದಾಗ ಆರೋಪಿತರೆಲ್ಲರೂ ಕೂಡಿ ಬಂದು ಆರೋಪಿ.1 ನೇದ್ದವಳು ನನ್ನ ಗಂಡನ ಆಸ್ತಿಯಲ್ಲಿ ಪಾಲು ಕೊಡುತ್ತಿಲ್ಲ, ಅಂತಾ ಕೇಳಿದ್ದು ಚಾಸಾ.1 ಮತ್ತು 4 ನೇದ್ದವರು ಇನ್ನು ಮಕ್ಕಳ ಮದುವೆ ಆದ ಮೇಲೆ ಕೊಡುತ್ತೇವೆ ಅಂತಾ ಹೇಳಿದ್ದಕ್ಕೆ ಚಾಸಾ.1 ನೇದ್ದವಳಿಗೆ ಈ ರಂಡಿ ಮುದುಕಿಯಾದರು ಇವಳ ಧಿಮಾಕು ಹೋಗಿಲ್ಲ , ಅಂತಾ ಅವಾಚ್ಯವಾಗಿ ಬೈದು 1 ಮತ್ತು 2 ನೇ ಆರೋಪಿತರು ತೆಕ್ಕೆಯಲ್ಲಿ ಹಿಡಿದು ಎಳೆದಾಡುತ್ತಿರುವಾಗ, ಚಾಸಾ.4 ರವರು ಜಗಳ ಬಿಡಿಸಲು ಬಂದಾಗ 4 ನೇ ಆರೋಪಿತರು ಹಿಡಿದುಕೊಂಡಾಗಿ 3 ನೇ ಆರೋಪಿತನು ಬಡಿಗೆಯಿಂದ ಚಾಸಾ.4 ನೇದ್ದವರ ಮೊಳಕಾಲಿಗೆ ಹೊಡೆದು ಗುಪ್ತ ಪೆಟ್ಟುಪಡಿಸಿದ್ದು ಇರುತ್ತದೆ. ಆಗ ಚಾಸಾ6 ರಿಂದ 8 ರವರು ಜಗಳದ ಸಪ್ಪಳ ಕೇಳಿ ಬಂದು ಜಗಳ ಬಿಡಿಸಿದ್ದು ಇರುತ್ತದೆ. ಜಗಳ ಬಿಟ್ಟು ಹೋಗುವಾಗ ಇವತ್ತು ನೀವು ಉಳಿದಿರಿ ನೀವು ಪಾಲು ಕೊಟ್ಟಿಲ್ಲ ಅಂತ ಅಂದರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ ಅಂತ ಜೀವದ ಬೆದರಿಕೆ ಹಾಕಿ ಹೋಗಿದ್ದು ಇರುತ್ತದೆಂದು ಪಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಮಳಖೇಡ ಪೊಲೀಸರು ತಮ್ಮ ಠಾಣಾ ಗುನ್ನಾ ನಂ.41/2022 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಂಗಡ 34 ರನ್ವಯ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತರ ಹಾಜರಾತಿಯನ್ನು ಪಡೆಯಲಾಯಿತು. ನಂತರ ಆರೋಪಿತರನ್ನು ಸೂಕ್ತ ಜಾಮೀನ ಮೇಲೆ ಬಿಡುಗಡೆ ಮಾಡಲಾಯಿತು. ನಂತರ ದಂಡ ಪ್ರಕ್ರಿಯಾ

ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಂಗಡ 34 ರನ್ವಯ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತರ ವಿರುದ್ದ ಅಪಾದನೆಗಳನ್ನು ರುಜುವಾತು ಪಡಿಸುವ ಸಲುವಾಗಿ ಚಾಸಾ.1 ಮತ್ತು 4ರವರನ್ನು ಪ್ರಾಸಾ.1 ಮತ್ತು 2ಎಂದು ವಿಚಾರಣೆ ಮಾಡಿದ್ದು ಹಾಗೂ ನಿಪಿ.1 ಮತ್ತು 2 ಎಂದು ದಾಖಲಾತಿಯನ್ನು ಮತ್ತು ಮು.ಮಾ.1ನ್ನು ಗುರುತಿಸಿಕೊಂಡಿರುತ್ತದೆ. ಅಭಿಯೋಜಕರು ಇನ್ನುಳಿದ ಸಾಕ್ಷ್ಯಗಳ ವಿಚಾರಣೆ ಮಾಡಬೇಕೆಂದು ಕೋರಿರುತ್ತಾರೆ. ಆದರೆ ಪಿ.ಡಬ್ಲ್ಯೂ-1 ಮತ್ತು 2 ರವರು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ, ಅಭಿಯೋಜಕರವರ ವಿನಂತಿಯನ್ನು ತಳ್ಳಿಹಾಕಿ, ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

6. ಪಿ.ಡಬ್ಲ್ಯೂ-1ಮತ್ತು 2ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆಯನ್ನು ಕೈ ಬಿಡಲಾಗಿದೆ.

7. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

8. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

**ಅಂಶಗಳು**

1. ದಿನಾಂಕ 17-07-2022ರಂದು ರಾತ್ರಿ 08.00 ಗಂಟೆ ಸುಮಾರಿಗೆ ಮಳಖೇಡ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಹಂಗನಳ್ಳಿ ಗ್ರಾಮದಲ್ಲಿ

ಚಾಸಾ.1, 4 ನೇದ್ದವರು ಮನೆಯಲ್ಲಿ ಇದ್ದಾಗ ಆರೋಪಿತರೆಲ್ಲರೂ ಕೂಡಿ ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು 1 ನೇ ಆರೋಪಿತಳು ನನ್ನ ಗಂಡನ ಆಸ್ತಿಯಲ್ಲಿ ಪಾಲು ಕೊಡುತ್ತಿಲ್ಲ, ಅಂತಾ ಕೇಳಿದ್ದು ಚಾಸಾ.1, 4 ನೇದ್ದವರು ಇನ್ನು ಮಕ್ಕಳ ಮದುವೆ ಆದ ಮೇಲೆ ಕೊಡುತ್ತೇವೆ ಅಂತಾ ಹೇಳಿದ್ದಕ್ಕೆ ಆರೋಪಿತರು ಅವಾಚ್ಯವಾಗಿ ಬೈದು 1 ಮತ್ತು 2 ನೇ ಆರೋಪಿತರು ತೆಕ್ಕೆಯಲ್ಲಿ ಹಿಡಿದು ಎಳೆದಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 323 ಸಂಗಡ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಚಾಸಾ.1 ನೇದ್ದವರನ್ನು ಎಳೆದಾಡುತ್ತಿರುವಾಗ, ಚಾಸಾ.4 ರವರು ಜಗಳ ಬಿಡಿಸಲು ಬಂದಾಗ 4 ನೇ ಆರೋಪಿತರು ಹಿಡಿದುಕೊಂಡಾಗ 3 ನೇ ಆರೋಪಿತರು ಬಡಿಗೆಯಿಂದ ಚಾಸಾ.4 ರವರ ಮೊಳಕಾಲಿಗೆ ಹೊಡೆದು ಗುಪ್ತ ಪೆಟ್ಟು ಪಡಿಸಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 324 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

3. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ 1 ನೇ ಆರೋಪಿತರು ಚಾಸಾ.1 ನೇದ್ದವಳಿಗೆ ಈ ರಂಡಿ ಮುದುಕಿಯಾದರು ಇವಳ ಧಿಮಾಕು

ಹೋಗಿಲ್ಲ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 504ರ ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

4. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಚಾಸಾ.1 ಮತ್ತು 4 ನೇದ್ದವರೊಂದಿಗೆ ಜಗಳ ತೆಗೆದು ಜಗಳ ಬಿಟ್ಟು ಹೋಗುವಾಗ ಇವತ್ತು ನೀವು ಉಳಿದಿರಿ ನೀವು ಪಾಲು ಕೊಟ್ಟಿಲ್ಲ ಅಂತಾ ಅಂದರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿ ಹೋಗಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 506ರ ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

5. ಯಾವ ಆದೇಶ ಅಥವಾ ಶಿಕ್ಷೆ?

9. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆ:

| | | |
|---|---|---|
| ಅಂಶ ನಂ.1 ರಿಂದ 4 | : | **ನಕರಾತ್ಮಕವಾಗಿ.** |
| ಅಂಶ ನಂ.5 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

## **ಕಾರಣಗಳು**

10. **ಅಂಶ ನಂ.1 ರಿಂದ 4:-** ಸದರಿ ಎಲ್ಲಾ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ಮೇಲೆ ಆಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.1 ಜಗದೇವಿ ಗಂಡ ಶಿವಶರಣಪ್ಪ ಇವರನ್ನು ಪ್ರಾ.ಸಾ.1 ಎಂದು ಹಾಗೂ ಚಾಸಾ.4 ಶಿವಶರಣಪ್ಪ ತಂದೆ ಸಿದ್ದಣ್ಣ ಇವರನ್ನು ಪ್ರಾಸಾ.2 ಎಂದು ಸಾಕ್ಷಿ ಮಾಡಿಸಿದ್ದು ಇರುತ್ತದೆ. ಪ್ರಾಸಾ.1 ರವರು ಸದರಿ ಪ್ರಕರಣದ ಪಿರ್ಯಾದಿದಾರರಾಗಿರುತ್ತಾರೆ ಹಾಗೂ ಪ್ರಾಸಾ.2 ಗಾಯಾಳುದಾರರಾಗಿರುತ್ತಾರೆ.

12. ಪ್ರಾಸಾ.1 ರವರು ಈ ಪ್ರಕರಣದ ಪಿರ್ಯಾಧಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ.4 ನನ್ನ ಗಂಡ. ಚಾಸಾ.5 ನನ್ನ ಮಗ. ಚಾಸಾ.6 ರಿಂದ 8 ನಮ್ಮ ಊರಿನವರು. ಆರೋಪಿತರು ಗೊತ್ತು. 1 ನೇ ಆರೋಪಿತಳು ನನ್ನ ಸೊಸೆ. 2 ರಿಂದ 4 ನೇ ಆರೋಪಿತರು ನಮ್ಮ ಸಂಬಂಧಿಕರು. ಆರೋಪಿತರು ಮತ್ತು ನಮ್ಮ ನಡುವೆ ಯಾವುದೇ ರೀತಿಯ ಗಲಾಟೆ ಆಗಿರುವುದಿಲ್ಲ. ಆರೋಪಿತರು ನನಗೆ ಹಾಗೂ ಚಾಸಾ.4 ರವರಿಗೆ ಹೊಡೆ ಬಡೆ ಮಾಡಿ ಜೀವ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ನಾನು ಯಾವುದೇ ರೀತಿಯ ಪಿರ್ಯಾದನ್ನು ನೀಡಿಲ್ಲ ಮತ್ತು ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇಲ್ಲ. ಸಾಕ್ಷಿಯು ದೂರು ದಾಖಲಾತಿ ನೋಡಿ ಗುರುತಿಸಿದ್ದು. ದೂರು ದಾಖಲಾತಿಯನ್ನು ನಿಪಿ.1 ಎಂದು ಗುರುತಿಸಲಾಗಿದೆ. ಆದರೇ ಸಾಕ್ಷಿಯು ನಿಪಿ.1 ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸರ್ಕಾರಿ ಸಹಾಯಕ ಅಭಿಯೋಜಕರು ಸುದೀರ್ಘ ಕಾಲ ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಅಭಿಯೋಜನೆಯ ಪರ ಹೊರ ತರಲು ಯಶಸ್ವಿಯಾಗಿರುವುದಿಲ್ಲ. ಒಂದು ಸರ್ಕಾರಿ ಜಾಲಿ ಬಡಿಗೆಯನ್ನು ಮು.ಮಾ.1 ಎಂದು ಗುರುತಿಸಲಾಗಿರುತ್ತದೆ.

13. ಪ್ರಾಸಾ.2 ರವರು ಈ ಪ್ರಕರಣದ ಗಾಯಾಳುದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ.1 ನನ್ನ ಹೆಂಡತಿ. ಚಾಸಾ.5 ನನ್ನ ಮಗ. ಚಾಸಾ.6 ರಿಂದ 8 ನಮ್ಮ ಊರಿನವರು. ಆರೋಪಿತರು ಗೊತ್ತು. 1 ನೇ ಆರೋಪಿತಳು ನನ್ನ ಸೊಸೆ. 2 ರಿಂದ 4 ನೇ ಆರೋಪಿತರು ನಮ್ಮ ಸಂಬಂಧಿಕರು. ಆರೋಪಿತರು ಮತ್ತು ನಮ್ಮ ನಡುವೆ ಯಾವುದೇ ರೀತಿಯ ಗಲಾಟೆ ಆಗಿರುವುದಿಲ್ಲ. ಆರೋಪಿತರು ನನಗೆ ಹಾಗೂ ಚಾಸಾ.1 ರವರಿಗೆ ಹೊಡೆ ಬಡೆ ಮಾಡಿ ಜೀವ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ನಾನು ಯಾವುದೇ ರೀತಿಯ ಹೇಳಿಕೆಯನ್ನು ನೀಡಿಲ್ಲ ಮತ್ತು ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸರ್ಕಾರಿ ಸಹಾಯಕ ಅಭಿಯೋಜಕರು ಸುದೀರ್ಘ ಕಾಲ ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಅಭಿಯೋಜನೆಯ ಪರ ಹೊರ ತರಲು ಯಶಸ್ವಿಯಾಗಿರುವುದಿಲ್ಲ. ಪ್ರಾಸಾ.2 ರವರ ಹೇಳಿಕೆ ಭಾಗವನ್ನು ನಿಪಿ.2 ಎಂದು ಗುರುತಿಸಲಾಗಿರುತ್ತದೆ.

14. ಈ ಪ್ರಕರಣದ ಬಹು ಮುಖ್ಯ ಸಾಕ್ಷಿದಾರರಾದ ಚಾಸಾ.1 ಸದರಿ ಪ್ರಕರಣದ ಫಿರ್ಯಾದಿದಾರರು ಮತ್ತು ಚಾಸಾ .4 ಗಾಯಾಳುದಾರರಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಯಾವುದೇ ಘಟನೆ ನಡೆದ ಬಗ್ಗೆ ಸಾಕ್ಷಿ ಹೇಳಿಲ್ಲ, ಅಲ್ಲದೆ ಪ್ರಾಸಾ.1 ಮತ್ತು 2ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ, ಆದುದರಿಂದ ಅಭಿಯೋಜನೆಯ ಪ್ರಕರಣದಲ್ಲಿ ಯಾವುದೇ ಹುರುಳಿಲ್ಲ ಅಂತಾ ಕಂಡುಬರುತ್ತದೆ. ಅಭಿಯೋಜಕರು ಇನ್ನುಳಿದ ಸಾಕ್ಷ್ಯಗಳ ವಿಚಾರಣೆ ಮಾಡಬೇಕೆಂದು ಕೋರಿರುತ್ತಾರೆ. ಆದರೆ ಪಿ.ಡಬ್ಲ್ಯೂ-1 ಮತ್ತು 2ರವರು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ, ಅಭಿಯೋಜಕರವರ ವಿನಂತಿಯನ್ನು ತಳ್ಳಿಹಾಕಿ, ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಹಾಗೂ

ಅಭಿಯೋಜನೆಯು ಆರೋಪಿತರ ವಿರುದ್ದ ಆಪಾದಿಸಲ್ಪಟ್ಟ ಕೃತ್ಯವನ್ನು ಆರೋಪಿತರು ಎಸಗಿದ್ದಾರೆ ಎನ್ನುವುದನ್ನು ನಿರೂಪಿಸಲು ಬಲವಾದ ಮತ್ತು ಒಪ್ಪಿಕೊಳ್ಳಬಹುದಾದ ಸಾಕ್ಷಾಧಾರಗಳನ್ನು ಒದಗಿಸಿ ನಿರೂಪಿಸುವಲ್ಲಿ ವಿಫಲವಾಗಿದೆ ಎಂದು ಹೇಳಬಹುದು. ಅದೇ ರೀತಿ ಅಭಿಯೋಜನೆಯು ಆರೋಪಿತರ ಕೃತ್ಯ ನಿರೂಪಿಸುವಲ್ಲಿ ವಿಫಲವಾಗಿದೆ. ಆದುದರಿಂದ ಅಭಿಯೋಜನೆಯು ಆರೋಪಿತರ ವಿರುದ್ದ ಆಪಾದನೆಯನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಎಂದು ಹೇಳುತ್ತಾ ಅಂಶ ಸಂಖ್ಯೆ 1 ರಿಂದ 4ನ್ನು **ನಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

15. **<u>ಅಂಶ ನಂ.5</u>:-** ಈ ಮೇಲೆ ಹೇಳಿದ ಅಂಶ ನಂ.1 ರಿಂದ 4ರ ಮೇಲಿನ ಚರ್ಚೆಯಂತೆ ಹಾಗೂ ಕಾರಣಗಳಿಗಾಗಿ ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೆನೆ.

**<u>ಆ ದೇ ಶ</u>**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, 1 ರಿಂದ 4 ನೇ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಂಗಡ 34ರನ್ವಯ ಶಿಕ್ಷಾರ್ಹ ಅಪರಾಧಗಳಿಗೆ ನಿರ್ದೋಷಿಗಳೆಂದು ಬಿಡುಗಡೆ ಗೊಳಿಸಲಾಗಿದೆ.**

**ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಭದ್ರತೆಗಳನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ.**

**ಮು.ಮಾ.1 ಒಂದು ಸರ್ಕಾರಿ ಜಾಲಿ ಬಡಿಗೆ ಯಾವುದೇ ಮೌಲ್ಯ ಹೊಂದಿರದ ವಸ್ತು ಆಗಿರುವುದರಿಂದ, ಅದನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಆದೇಶಿಸಲಾಗಿದೆ.**

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 11ನೇ ಆಗಸ್ಟ- 2026 ರಂದು ತೀರ್ಪನ್ನು ಘೋಷಿಸಲಾಯಿತು)

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ .ದಂಡಾಧಿಕಾರಿಗಳು,**
**ಸೇಡಂ .**

**ಅನುಬಂಧ**

**ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳುಃ**

ಪಿ.ಡಬ್ಲೂ -1 : ಜಗದೇವಿ ಗಂಡ ಶಿವಶರಣಪ್ಪ
ಪಿ.ಡಬ್ಲ್ಯೂ -2 : ಶಿವಶರಣಪ್ಪ ತಂದೆ ಸಿದ್ದಣ್ಣ

**ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳುಃ**

ನಿ.ಪಿ.1 : ದೂರು
ನಿ.ಪಿ.2 : ಪ್ರಾಸಾ.2 ರವರ ಹೇಳಿಕೆ ಭಾಗ

**ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳ ವಿವರಃ**

ಮು.ಮಾ.1ಃ ಒಂದು ಸರ್ಕಾರಿ ಜಾಲಿ ಬಡಿಗೆ

**ಆರೋಪಿತರ ಪರವಾಗಿ ವಿಚಾರಣೆಗೊಳಪಡಿಸಲಾದ ಸಾಕ್ಷಿ ದಾರರ ವಿವರಃ**
- ಇಲ್ಲ -

**ಆರೋಪಿತರ ಪರವಾಗಿ ಗುರುತಿಸಲಾದ ದಾಖಲೆಗಳ ವಿವರಃ**
- ಇಲ್ಲ -

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ .ದಂಡಾಧಿಕಾರಿಗಳು,**
**ಸೇಡಂ .**

*********

BALU Digitally signed by BALU Date: 2026.08.11 17:59:18 +0530